( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ04/03/2024**
**ಅಸಲು ದಾವೆ.ನಂ.146/2010**
**ಪಿ.ಡಬ್ಲ್ಯೂ1**

( ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ.ಎಲ್.ಡಿ. ವಕೀಲರಿಂದ 1 ನೇ ಪ್ರತಿವಾದಿಯ ಪರವಾಗಿ )

ನನ್ನ ತಾಯಿ ಆರೋಗ್ಯವಾಗಿ ಇರುವುದಿಲ್ಲ. ಸಾಕ್ಷಿಗೆ ಮುಂದುವರೆದು ಅವರು ಓಡಾಡಿದರೆ ಅವರ ಎರಡು ಪಾದಗಳು ಊದಿಕೊಳ್ಳುತ್ತವೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಲೀವರ್ ನಲ್ಲಿ ಕಲ್ಲು ಇರುವುದರಿಂದ ರೆಸ್ಟ್ ಮಾಡಬೇಕು ಎಂದು ವೈದ್ಯರು ಹೇಳಿರುತ್ತಾರೆ. ಆ ರೀತಿ ವೈದ್ಯರು ಹೇಳಿರುವುದಕ್ಕೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ. ಅವರಿಗೆ ಓಡಾಡಲು ಆಗುವುದಿಲ್ಲ ಎಂಬುದನ್ನು ಬಿಟ್ಟರೆ ಬೇರೆ ರೀತಿ ನಿಮ್ಮ ತಾಯಿಯ ಆರೋಗ್ಯ ಚೆನ್ನಾಗಿ ಇದೆ ಎಂದರೆ ಸಾಕ್ಷಿಯು ಅವರಿಗೆ 70 ವರ್ಷ ವಯಸ್ಸು ಆಗಿರುತ್ತದೆ, ಅಷ್ಟು ಜ್ಞಾಪಕ ಶಕ್ತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸಂತ್ಯಾಂಶ ತಿಳಿಯುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನನ್ನ ಇಬ್ಬರೂ ಅತ್ತೆಯರು ಬದುಕಿರಲಿಲ್ಲ. ನನ್ನ ಒಬ್ಬ ಅತ್ತೆ 2022 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಒಬ್ಬ ಅತ್ತೆಗೆ 7 ಜನ ಮಕ್ಕಳು, ಅವರಲ್ಲಿ 4 ಜನ ಹೆಣ್ಣುಮಕ್ಕಳು, 3 ಜನ ಗಂಡು ಮಕ್ಕಳು. 2 ನೇ ಅತ್ತೆಗೆ ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಸದರಿ ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬ ಮರಣ ಹೊಂದಿರುತ್ತಾರೆ.

1992 ನೇ ಇಸವಿಯಲ್ಲಿ ನಿಮ್ಮ ತಾಯಿ ಮತ್ತು ನೀವು ಇವೆಲ್ಲರೂ ಸೇರಿ ನಿಮ್ಮ ಚಿಕ್ಕಪ್ಪಂದಿರಿಗೆ ಬರೆದುಕೊಟ್ಟ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಆ ರೀತಿ ಯಾವುದೆ ಕ್ರಯ ಪತ್ರವನ್ನು ನಾವು ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ಹಾಜರು ಪಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯ ನಮಗೆ ಅದು ಗೊತ್ತಿರಲಿಲ್ ಎಂದು ನುಡಿಯುತ್ತಾರೆ.

ದಿಃ26-11-1992 ರಂದು ರೂ.25,000/- ರೂಗೆ ಸ.ನಂಃ 59/1 ರಲ್ಲಿ ಒಟ್ಟು 2 ಎಕರೆ 20 ಗುಂಟೆ ಜಮೀನನ್ನು ನಿಮ್ಮ ತಾಯಿ ಮತ್ತು ನೀವುಗಳು ಸೇರಿ ನಿಮ್ಮ ಚಿಕ್ಕಪ್ಪಂದಿರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಮಗೆ ಆ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಶೋಧ ಎಂದರೆ ನಾನೇ. ಸದರಿ ಕ್ರಯ ಪತ್ರದಲ್ಲಿ ನಿಮ್ಮ ಮದುವೆಯ ಖರ್ಚಿಗಾಗಿ ಮತ್ತು ವ್ಯವಹಾರ ಉದ್ದೇಶಕ್ಕಾಗಿ ಮತ್ತು ಕೈ ಸಾಲ ಮತ್ತು ಬ್ಯಾಂಕ್ ಸಾಲವನ್ನು ತೀರಿಸುವುದಕ್ಕಾಗಿ 25,000/- ರೂ. ನಿಮ್ಮ ಹಿಸ್ಸೆಗೆ ಬಂದ ಜಮೀನನ್ನು ನೀವುಗಳು ನಿಮ್ಮ ಚಿಕ್ಕಪ್ಪಂದಿದರಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯ ಸರಿಯಲ್ಲ, ನಮ್ಮ ತಂದೆ ತೀರಿ ಹೋದ ನಂತರ ನಮಗೆ ಮೋಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಬಸವನಗುಡಿ ಬೀದಿಯಲ್ಲಿರುವ ಮನೆ ಸ್ವತ್ತನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಬಸವನಗುಡಿಯಲ್ಲಿರುವ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಬಸವನಗುಡಿಯಲ್ಲಿರುವ ಸ್ವತ್ತು 1 ನೇ ವಾದಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿಯೇ ಸದರಿ ಸ್ವತ್ತನ್ನು ಬಾಡಿಗೆಗೆ ಕೊಟ್ಟು ಅದರ ಬಾಡಿಗೆಯನ್ನು ಅವರೇ ತೆಗೆದುಕೊಳ್ಳುತ್ತಿದ್ದರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಿಂದ ಬಂದ ಬಾಡಿಗೆಯನ್ನು 1 ನೇ ವಾದಿ ಕೂಡ ಬಳಸಿಕೊಳ್ಳುತ್ತಿದ್ದು ಮತ್ತು ಸದರಿ ಬಾಡಿಗೆಯಿಂದ ನನಗೂ ಸ್ವಲ್ಪ ಪಾಲನ್ನು ನೀಡುತ್ತಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಸೇರಿ ಯೋಗೇಶ, ಅನುಸೂಯ ಮತ್ತು ಸೌಮ್ಯ ರವರಿಗೆ 3 ಮನೆಗಳನ್ನು ಬಾಡಿಗೆಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಬಸವನಗುಡಿಯಲ್ಲಿರುವ ಸ್ವತ್ತು ಮೂಲತಃ ಕಾಳಪ್ಪಶೆಟ್ಟಿಯವರಿಗೆ ಸೇರಿದ ಸ್ವತ್ತು ಅಗಿರುತ್ತದೆ. ಈಗಲೂ ಸದರಿ ಸ್ವತ್ತು ಕಾಳಪ್ಪಶೆಟ್ಟಿಯವರ ಹೆಸರಿನಲ್ಲಿ ಇರುತ್ತದೆಯೇ ಅಥವಾ ಬೇರೆಯವರ ಹೆಸರಿಗೆ ಬದಲಾವಣೆ ಆಗಿರುತ್ತದೆಯೇ ಎಂದು ನನಗೆ ಗೊತ್ತಿಲ್ಲ. 1992 ರಲ್ಲಿ ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿ ಮತ್ತು ಚಿಕ್ಕಪ್ಪಂದಿರು ಬದುಕಿದ್ದ ಸಂದರ್ಭದಲ್ಲಿ ಕುಟುಂಬದ ಜಮೀನುಗಳನ್ನು ವಿಭಾಗ ಮಾಡಿಕೊಂಡು ನಂತರ 1992 ರಲಿಲ ನಮ್ಮ ಹಿಸ್ಸೆಗೆ ಬಂದ ಸ.ನಂಃ 59/1 ರ 2 ಎಕರೆ 20 ಗುಂಟೆ ಜಮೀನನ್ನು ನಾವುಗಳು ನಮ್ಮ ಚಿಕ್ಕಪ್ಪಂದಿಗೆ ಬರೆದುಕೊಟ್ಟು ನಾವು ಹೆಣ್ಣು ಮಕ್ಕಳಾಗಿರುವುದರಿಂದ ಬಸವನಗುಡಿಯಲ್ಲಿರುವ ಸ್ವತ್ತನ್ನು ನಾವು ಕೇಳಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಜಮೀನು ಕೇಳಿದಾಗ ಕೊಟ್ಟಿಲ್ಲ ಅದರ ಬದಲಾಗಿ

ಬಸವನಗುಡಿಯ ಸ್ವತ್ತನ್ನು ನಿಮಗೆ ಕೊಟ್ಟಿರುತ್ತಾರೆಯೇ ಎಂದರೆ ಸಾಕ್ಷಿಯು ನಮಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಬಸವನಗುಡಿಯಲ್ಲಿರುವ ಸ್ವತ್ತಿನ ಖಾತಾ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ.

ನಮ್ಮ ಒಟ್ಟು ಕುಟುಂಬದ ಜಮೀನುಗಳ ಸರ್ವೆ ನಂಃ 59/1 ಮತ್ತು 59/2. ಸ.ನಂಃ 59/1 ರಲ್ಲಿ 2 ಎಕರೆ 20 ಗುಂಟೆ ಜಮೀನು, ಸ.ನಂಃ 59/2 ರಲ್ಲಿ 4 ಎಕರೆ 2 ಗುಂಟೆ ಜಮೀನು ಇರುತ್ತದೆ. ಸ.ನಂಃ 52/2 ರ ಜಮೀನು ನಮ್ಮ ತಾತನಿಂದ ಬಂದಿರುತ್ತದೆ. ಸದರಿ ಜಮೀನನ್ನು ನಮ್ಮ ತಾತ ಕೊಂಡುಕೊಂಡಿರುತ್ತಾರೆ. ಸ.ನಂಃ59/1 ರಲ್ಲಿರುವ 2 ಎಕರೆ 20 ಗುಂಟೆ ಜಮೀನು ನಮ್ಮ ತಂದೆ ಕ್ರಯಕ್ಕೆ ಪಡೆದುಕೊಂಡಿರುವ ಜಮೀನು ಆಗಿರುತ್ತದೆ.. ಸ.ನಂಃ 59/1 ರಲ್ಲಿ 2 ಎಕರೆ 20 ಗುಂಟೆ ಜಮೀನು ನಿಮ್ಮ ತಂದೆ ಖರೀದಿಸಿದ ಜಮೀನು ಆಗಿರುವುದರಿಂದ ಅದನ್ನು ಈ ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಅವೆಲ್ಲವೂ ಒಟ್ಟು ಕುಟುಂಬದಲ್ಲಿ ಇವೆ ಎಂದು ನುಡಿಯುತ್ತಾರೆ. ಸ.ನಂಃ 59/1 ರ ಜಮೀನು ನಿಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಅದರೂ ಕೂಡ ಅದನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಿ ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದ ಸ್ವತ್ತು ಎಂದು ನುಡಿಯುತ್ತಾರೆ. ಸ.ನಂಃ 59/1 ರ ಜಮೀನನ್ನು 1977 ರಲ್ಲಿ ನನ್ನ ತಂದೆ ಚನ್ನವೀರಶೆಟ್ಟಿ ರವರ ಮಗ ನಂಜುಂಡಸ್ವಾಮಿಯವರಿಂದ ಖರೀದಿಸಿರುತ್ತಾರೆ. ನನ್ನ ಸದರಿ ಜಮೀನನ್ನು ಖರೀದಿಸಿದ ನಂತರ ಸದರಿ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿನಲ್ಲಿ ಮುಂದುವರೆಯುತ್ತಿದೆ. ಸದರಿ ಸ್ವತ್ತಿಗೆ ಇಲ್ಲಿಯವರೆಗೂ ನೀವೇ ಕಂದಾಯವನ್ನು ಕಟ್ಟಿ ಅನುಭವಿಸುತ್ತಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಸದರಿ ಸ್ವತ್ತನ್ನು ನನ್ನ ಚಿಕ್ಕಪ್ಪಂದಿರು ಅನುಭಸುತ್ತಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ 1979 ರಲ್ಲಿ ಮರಣ ಹೊಂದಿರುತ್ತಾರೆ. ನಿಮ್ಮ ತಂದೆ ಮರಣ ಹೊಂದಿದ ನಂತರ ನೀವು ಸದರಿ ಸ್ವತ್ತಿನ ಖಾತೆಯನ್ನು ನಿಮ್ಮ ಹೆಸರಿಗೆ ಬದಲಾಣೆ ಮಾಡಿಕೊಳ್ಳಲು ಅರ್ಜಿಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಆಗ ನಾವು ಸಣ್ಣ ಮಕ್ಕಳು ಅಗಿದ್ದೆವು ಮತ್ತು ನಮ್ಮ ಚಿಕ್ಕಪ್ಪಂದಿರು ಗಲಾಟೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನೀವು ವಯಸ್ಕರಾದ ನಂತರ ಸದರಿ ಖಾತೆಯ ಬದಲಾವಣೆಯನ್ನು ಮಾಡಲು ಪ್ರಯತ್ನಿಸಿದೀರಾ ಎಂದರೆ ಸಾಕ್ಷಿಯ ಹೌದು ಆದರೆ ಆ ಸಮಯದಲ್ಲಿ ರಾಜಿ ಮಾಡಿಕೊಳ್ಳೋಣ ಎಂದು ಹೇಳಿದ್ದರು ಅಷ್ಟರಲ್ಲಿ ಸುಳ್ಳು ಖಾತೆಯನ್ನು ಕೂಡ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನೀವು ಅದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಏನಾದರೂ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನಮಗೆ ಸುಳ್ಳು ಖಾತೆ

ಮಾಡಿಸಿಕೊಂಡಿರುವ ವಿಚಾರ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಖಾತೆ ಮಾಡಿಸಿಕೊಂಡಿರುವ ವಿಚಾರ 2010 ರಲ್ಲಿ ನನ್ನ ಚಿಕ್ಕಪ್ಪಂದಿರು ಜಮೀನನ್ನು ಮಾರಾಟ ಮಾಡಲು ಹೊರಟ ಸಮಯದಲ್ಲಿ ನನಗೆ ತಿಳಿಯಿತು. 2010 ರ ನಂತರ ಆ ರೀತಿ ಖಾತೆ ಬದಲಾವಣೆ ಮಾಡಿಸಿಕೊಂಡಿರುವುದನ್ನು ಪ್ರಶ್ನಿಸಿ ಈ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

1992 ನೇ ಇಸವಿಯಲ್ಲಿಯೇ ನಿಮ್ಮ ಹಿಸ್ಸಾ ಸ್ವತ್ತನ್ನು ನೀವು ನಮ್ಮ ಚಿಕ್ಕಪ್ಪಂದಿಗೆ ಮಾರಾಟ ಮಾಡಿರುವುದರಿಂದ ನಿಮಗೆ ಖಾತೆ ಬರುವುದಿಲ್ಲವೆಂದು ತಿಳಿದಿದ್ದು, ಆದ್ದರಿಂದ ನೀವು ನಿಮ್ಮ ಹೆಸರಿಗೆ ಸದರಿ ಸ್ವತ್ತಿನ ಖಾತೆಯನ್ನು ಮಾಡಿಸಲು ಮುಂದಾಗಿಲ್ಲ ಎಂದರೆ ಸಾಕ್ಷಿಯು ನಮಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಸ.ನಂಃ 59/1 ಮತ್ತು 59/2 ರಲ್ಲಿ ಹಾದು ಹೋಗಿರುವ ರಾಮನಾಥಪುರ ಅರಕಲಗೂಡು ರಸ್ತೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ವಿಸ್ತೀರ್ಣವನ್ನು ಸೇರಿಸಿ ಈ ದಾವೆಯಲ್ಲಿ ಜಮೀನಿನ ವಿಸ್ತೀರ್ಣ ಮತ್ತು ಚೆಕ್ಕು ಬಂದಿಯನ್ನು ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂಃ 59/1 ಮತ್ತು 59/2 ರಲ್ಲಿರುವ ಜಮೀನುಗಳು ದುರಸ್ತು ಮತ್ತು ಪೋಡು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಗಳಲ್ಲಿ ಎಷ್ಟು ಪೋಡು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ಹಿಸ್ಸೆಯಾದಾಗಿನಿಂದ ನಿಮ್ಮ ಚಿಕ್ಕಪ್ಪಂದಿರು ಬ್ಯಾಂಕ್ ನಿಂದ ಸಾಲವನ್ನು ಪಡೆದುಕೊಂಡು ಅವರವರ ಹಿಸ್ಸಾ ಜಮೀನಿನ ಸ್ವಾಧೀನಾದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಾವುಗಳು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನುಡಿಯುುತ್ತಾರೆ. ಕೆಲವು ನಿವೇಶನಗಳನ್ನು ನಾವು ಮತ್ತು ಚಿಕ್ಕಪ್ಪಂದಿರು ಸೇರಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕ್ರಯಕ್ಕೆ ಪಡೆದುಕೊಂಡಿರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿ ವಿಚಾರ ನಮಗೆ ತಿಳಿದೇ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ನಾವು ಜಮೀನಿನ ಬಳಿ ಹೋಗಿಯೇ ಇಲ್ಲ ಮತ್ತು ಅಲ್ಲಿ ಆಗಿರುವ ವ್ಯವಹಾರದ ಬಗ್ಗೆ ನನಗೆ ತಿಳಿದೇ ಇಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ನಾವು ಹೋದಾಗ ಚಿಕ್ಕಪ್ಪಂದಿರು ಜಗಳ ಮಾಡಿ ಕಳುಹಿಸುತ್ತಾರೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪಂದಿರು ಜಗಳ ಮಾಡಿರುತ್ತಾರೆ ಎಂಬುದಕ್ಕೆ ಯಾವುದೇ ಠಾಣೆಗೆ ದೂರನ್ನು ಕೊಟ್ಟಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.